(*b*) whether the proposal was recommended by the District Educational Authorities ;

(*c*) if so, the final decision taken by Government in the matter ?

A.—Sri K. V. SHANKARA GOWDA (Minister for Education and Agriculture).—

(*a*) No.

(*b*) No.

(*c*) Does not arise.

Sri B. P. KADAM.—Is it not a fact that St. Micheal's Convent at Karwar had last year requested the Administrative Officer, School Board, to take over the Marathi School run by it ?

Sri K. V. SHANKARA GOWDA.—It is not true Sir. No proposal has been made to take over the Marathi School run by St. Micheal's Convent.

Sri B. P. KADAM.—Is it not a fact that the St. Micheal's Convent requested the Administrative Officer, School Board, North Kanara, to take over the Marathi School run by it ?

Sri K. V. SHANKARA GOWDA.—I have no information about that Sir. Government have not received any proposal.

Sri B. P. KADAM.—Is it not a fact that at least the proposal has been pending before the district authorities and it has reached the Deputy Director of Education, Dharwar ?

Sri K. V. SHANKARA GOWDA.—The facts of the case are : there is no proposal to take over the existing school. But the D.P.I. has sent a proposal to Government to open a Marathi School in Karwar which is pending before the Government. That is a separate proposal altogether. It has nothing to do with the question of taking over the existing school.

Sri B. P. KADAM.—Is it within the premises of the St. Micheal's Convent ?

Sri K. V. SHANKARA GOWDA.—I have no information about it.

Revision of Pay of Panchayat Seceretaries

54. Sri B. BHASKAR SHETTY (Kaup).—

Will the Minister for Development and Co-operation be pleased to state :—

(*a*) whether Government have received any representations from Secretaries of Panchayats requesting revision of their present pay from

(SRI B. BHASKAR SHETTY)

Rs. 65 p.m. to Rs. 100 p.m. on par with Gramsevaks in view of the fact that they are S.S.L.C. holders and have been specially trained for the job;

(*b*) the action taken on those representations;

(*c*) the reasons for not regularising the services of these secretaries who have put in more than four years service, and sanctioning the increments due to them so far;

(*d*) the reasons for not paying the travelling allowance to the Secretaries ever since they joined service, though they are required to perform journeys often in connection with their duties?

A.—Sri P. M. NADGOUDA (Minister for Development and Co-operation).—

(*a*) Yes.

(*b*) The question of having a separate full-time Panchayat Secretaries and other matters are under consideration.

(*c*) This is being done.

(*d*) No representation regarding non-payment of T.A. is received. However, suitable instructions have been issued to the concerned officers in the matter.

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಟ್ರೇನಿಂಗ್ ಪಡೆದ ಮತ್ತು ಎಸ್ಸೆಸ್ಸೆಲ್ಸ್ಸೀ ಪಾಸು ಮಾಡಿರುವ ಪಂಚಾಯತ ಸೆಕ್ರೆಟರಿಗಳಿಗೆ ಈ ಸ್ಕೇಲನ್ನು ಏತಕ್ಕೆ ಕೊಡುವುದಿಲ್ಲ?

† ಶ್ರೀ ಪಿ. ಎಂ. ನಾಡಗೌಡ.—ಈ ಪ್ರಶ್ನೆ ಸರಕಾರದ ಮುಂದೆ ಪರಿಶೀಲನೆಯಲ್ಲಿದೆ. ಮೈಸೂರು ರಾಜ್ಯದಲ್ಲಿ ಟೆಂಪರರಿ ಪಂಚಾಯತ್ ಸೆಕ್ರೆಟರೀಸ್ ಇದ್ದಾರೆ, ಪಾರ್ಟ್‌ಟೈಂ ಸೆಕ್ರೆಟರೀಸ್ ಇದ್ದಾರೆ, ಅಲ್ಲದೆ ವಿಲೇಜ್ ಅಕೌಂಟೆಂಟ್ ಹಾಗೂ ಎಕ್ಸ್-ಅಫಿಷಿಯೋ ವಿಲೇಜ್ ಪಂಚಾಯತ್ ಸೆಕ್ರೆಟರಿ ಕೂಡ ಇದ್ದಾರೆ. ಇದು ಕ್ಲಿಷ್ಟವಾದ ಪ್ರಶ್ನೆಯಾಗಿದೆ. ಈ ಪ್ರಶ್ನೆ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಇದೆ. ಅದು ತೀರ್ಮಾನ ಮಾಡಿ ರಿಪೋರ್ಟ್ ಬಂದ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಸರಕಾರ ಆದೇಶ ಮಾಡಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ವಿಲೇಜ್ ಅಕೌಂಟೆಂಟ್-ಕಂ-ಪಂಚಾಯತ ಸೆಕ್ರೆಟರಿ ಇದ್ದವರು ಟ್ರೇನ್ಡ್ ಆಗಿದ್ದಾರೆ. ಅವರಿಗೆ ಗ್ರಾಮಸೇವಕರ ಸಂಬಳದ ಸ್ಕೇಲು ಕೊಡುವುದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಈ ಪ್ರಶ್ನೆ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಇದೆ. ಅವರಿಂದ ರಿಪೋರ್ಟ್ ಬಂದ ಮೇಲೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಪಂಚಾಯತ ಸೆಕ್ರೆಟರಿಗಳು ನಾಲ್ಕು ವರ್ಷ ಸರ್ವಿಸ್ ಮಾಡಿದ್ದಾರೆ. ಹಾಗಾದರೆ ಅವರ ಈ ನಾಲ್ಕು ವರ್ಷದ ಸರ್ವಿಸ್ ರೆಗ್ಯುಲರೈಜ್ ಮಾಡುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಅದು ಅಷ್ಟು ಸರಳವಾದ ಪ್ರಶ್ನೆಯಲ್ಲ. ಅದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಗ್ರಾಮೀಣ ವಿಭಾಗದಲ್ಲಿ ಮೂರು ತರಹದ ಸಂಸ್ಥೆಗಳಿವೆ. ವಿಲೇಜ್ ಅಕೌಂಟೆಂಟ್, ಸಹಕಾರ ಸಂಘದ ಸೆಕ್ರೆಟರಿ ಹಾಗು ಪಂಚಾಯತ ಸೆಕ್ರೆಟರಿ ಎಂದು ಇದ್ದಾರೆ. ಆದರೆ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಮೂಲಕ ಈ ಮೂರು ನೌಕರರಿಗೆ ಪಗಾರು ಕೊಡಬೇಕಾಗುತ್ತದೆ ಎನ್ನುವುದು ಇದರಲ್ಲಿ ಅಡಕವಾಗಿದೆ. ಆದುದರಿಂದ ಈ ವಿಷಯವನ್ನು ಕ್ಯಾಬಿನೆಟ್ ಸಬ್ ಕಮಿಟಿ ವಿಚಾರ ಮಾಡಿ

ರಿಪೋರ್ಟ್ ಕೊಟ್ಟಮೇಲೆ ನಿಮ್ಮ ಪ್ರಶ್ನೆಗೆ ಉತ್ತರ ಹೇಳಲಿಕ್ಕೆ ಬರುತ್ತದೆ. It is now under the active consideration of the Government.

ಶ್ರೀ ಎಸ್. ಎಂ. ಗುರೆಡ್ಡಿ.—ಪಂಚಾಯತ್ ಸೆಕ್ರೆಟರಿಗಳಿಗೆ ಹೆಚ್ಚುವರಿ ಪಗಾರು ಮತ್ತು ತುಟ್ಟಿಭತ್ಯ ಕೊಡುವ ಬಗ್ಗೆ ಸರಕಾರಿ ಆರ್ಡರ್ ಆಗಿದ್ದರೂ ಕೂಡ ಇನ್ನೂವರೆಗೆ ರೂಲ್ಸ್ ಆಗಿಲ್ಲ ಎಂದು ಕೊಡಲಿಕ್ಕೆ ಆಗಿಲ್ಲ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಸರಕಾರದ ಗಮನಕ್ಕೆ ಹಾಗೆ ಬಂದಿಲ್ಲ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಬೇರೆ. ನಾನ್ ಎಸ್ಪೆಸ್ಪೆಲ್ಲೀ ಪಂಚಾಯತ ಸೆಕ್ರೆಟರಿ ಬಗ್ಗೆ ಏನು ಎಂದು ಮಾನ್ಯ ಸದಸ್ಯರ ಪ್ರಶ್ನೆ ಇದೆ. ಅದೂ ಕೂಡ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಪರಿಶೀಲನೆಗೆ ಇದೆ. ಆ ರಿಪೋರ್ಟ್ ಬರುವವರೆಗೆ ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದು 8 ವರ್ಷಗಳಾದರೂ ಕೂಡ ಎಷ್ಟೋ ಪಂಚಾಯಿತಿಗಳಿಗೆ ಕಾರ್ಯದರ್ಶಿಗಳಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

1-30 P.M.

ಶ್ರೀ ಪಿ. ಎಂ. ನಾಡಗೌಡ.—ತಾತ್ಕಾಲಿಕವಾದ ವ್ಯವಸ್ಥೆಯನ್ನು ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ತಿಂಗಳಿಗೆ 50 ರೂಪಾಯಿ ಪಗಾರು ಕೊಟ್ಟು ಟೆಂಪೊರರಿಯಾಗಿ ನೇಮಕಗಳನ್ನು ಮಾಡಿ ಕೆಲಸ ನಡೆಸಬೇಕೆಂದು ತಿಳಿಸಿದೆ. ಮಾನ್ಯ ಸದಸ್ಯರು ಹೇಳುವಂಥ ಪರಿಸ್ಥಿತಿ ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ಅದರ ಮೇರೆ ಕ್ರಮ ತೆಗೆದುಕೊಳ್ಳುತ್ತೇವೆ.

Sri G. CHANDRAKANT.—Is the Government aware that there is no provision in the Act itself with regard to the T. A. and D. A. to the Panchayat Secretaries and the Presidents ? If so, will the Government consider amending the Act itself ?

Sri P. M. NADGOUDA.—It is not covered by this question.

ಶ್ರೀ ಬಿ. ಭಾನ್ಯರ ಶೆಟ್ಟಿ.—ರೂಲ್ಸ್ ಏನಾದರೂ ತಿದ್ದುಪಡಿ ಮಾಡಬೇಕಾಗಿದ್ದರೆ ಅದನ್ನಾದರೂ ಮಾಡುತ್ತೀರಾ ಸ್ವಾಮಿ ?

ಶ್ರೀ ಪಿ. ಎಂ. ನಾಡಗೌಡ.—ರೂಲ್ಸ್ ಬೇಕಾದರೂ ತಿದ್ದುಪಾಟು ಮಾಡುತ್ತೇವೆ, ಆಕ್ಟ್ ಬೇಕಾದರೂ ತಿದ್ದುಪಾಟು ಮಾಡುತ್ತೇವೆ. ಆದರೆ ಉಪಸಮಿತಿಯವರ ಸಿಫಾರಸುಗಳು ಬಂದಮೇಲೆ ಇದನ್ನು ಪರಿಶೀಲಿಸಲಾಗುತ್ತದೆ ಎಂದು ಆಗಲೇ ಹೇಳಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾಲ್ಕು ವರ್ಷಕ್ಕಿಂತ ಹೆಚ್ಚು ಸರ್ವಿಸ್ ಮಾಡಿದವರನ್ನು ಇನ್ನೂ ಖಾಯಂ ಗೊಳಿಸಿಲ್ಲ. ಇಂಥವರು ಎಷ್ಟು ಜನರಿದ್ದಾರೆ? ಎಷ್ಟು ಬೇಗ ಇವರನ್ನು ಖಾಯಂ ಗೊಳಿಸುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಆ ಅಂಕಿಅಂಶಗಳು ಈಗ ಸಿಕ್ಕುವುದಿಲ್ಲ. ಇವರಿಗೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳನ್ನೂ ಉಪಸಮಿತಿಗೆ ರೆಫರ್ ಮಾಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಂತ್ರಿಮಂಡಲದ ಉಪಸಮಿತಿಯವರ ವರದಿ ಬರಲು ಇನ್ನೂ ಎಷ್ಟು ದಿವಸವಾಗುತ್ತದೆ? 65 ರೂಪಾಯಿಗಳಲ್ಲಿ ಈ ನೌಕರರು ಜೀವನ ನಡೆಸುವುದಕ್ಕಾಗದೆ ಮೈ ಕೈ ಎಲ್ಲ ಸಾಲ ಮಾಡಿಕೊಂಡು ಅವರಿಗೆ ಸಾಮಾನು ಹುಟ್ಟುವುದೇ ಕಷ್ಟವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಪಿ. ಎಂ. ನಾಡಗೌಡ.—ಉಪಸಮಿತಿಯವರು ಶೀಘ್ರದಲ್ಲಿಯೇ ವರದಿಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳಲಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮುಖ್ಯ ಮಂತ್ರಿಗಳವರಿಗೆ ಹೆಚ್ಚು ಪೇಳೆ ಸಿಕ್ಕದೆ ಇರುವುದರಿಂದ ಉಪಸಮಿತಿ ಸಭೆ ಸೇರಿ, ಸಿಫಾರಸು ಮಾಡಿ ಅದನ್ನು ಮಂತ್ರಿಮಂಡಲದ ಮುಂದೆ ತೆಗೆದುಕೊಂಡು ಹೋಗಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಇನ್ನೂ ಎಷ್ಟು ವರ್ಷ ಹಿಡಿಯುತ್ತದೆ ಸ್ವಾಮಿ ?

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಮುಖ್ಯ ಮಂತ್ರಿಯವರು ಈ ಉಪಸಮಿತಿಯಲ್ಲಿ ಇಲ್ಲ. ಇದರಲ್ಲಿ ಹಣಕಾಸಿನ ಸಚಿವರು, ಅಭಿವೃದ್ಧಿ ಮತ್ತು ಸಹಕಾರ ಖಾತೆ ಸಚಿವರು, ಕಂದಾಯ ಸಚಿವರು ಮತ್ತು ಕಂದಾಯ ಉಪಸಚಿವರು ಮಾತ್ರ ಇದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—(ಇ) ಭಾಗದ ಪ್ರಶ್ನೆಗೆ ಉತ್ತರವಾಗಿ 'ಇದನ್ನು ಮಾಡರಾಗುತ್ತಿದೆ.' ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ಸರ್ಕಾರ ಕೆಲಸ ಮಾಡಲಕ್ಕೆ ರಾಯಿಖ್ ಇಲ್ಲ ಎನ್ನುವುದನ್ನು ಒಪ್ಪಿಕೊಂಡಂತಾಗುತ್ತದೆ. ನಿಮಗೆ ರಾಯಿಖ್ ಆಗಲಕ್ಕೆ ಪ್ರಯತ್ನ ಮಾಡುತ್ತೀರಿ ಎಂದು ಸರ್ಟಿಫಿಕೇಟ್ ಕೊಡಬೇಕೋ ಹೇಗೆ, ಇದನ್ನು ಯಾವ ರೀತಿ ಅರ್ಥ ಮಾಡಿಕೊಳ್ಳಬೇಕು ಸ್ವಾಮಿ ?

ಶ್ರೀ ಪಿ. ಎಂ. ನಾಡಗೌಡ.—'It is under the active consideration of the Government' ಎನ್ನುವುದರ literal translation ಹಾಗೆ ಆಗುತ್ತದೆಯೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಾಗಲಿಲ್ಲ.

ಶ್ರೀ ಜಿ. ಟಿ. ಗೋವಿಂದ ರೆಡ್ಡಿ.—ಪಂಚಾಯಿತಿ ಕಾರ್ಯದರ್ಶಿಗಳು ಏನೇನು ಕೆಲಸಗಳನ್ನು ಮಾಡಲು ಅಪ್ಪಣೆಯಾಗಿದೆ, ಅವರ ಕಾರ್ಯಗಳೇನು ಸ್ವಾಮಿ ?

ಶ್ರೀ ಪಿ. ಎಂ. ನಾಡಗೌಡ.—ಪಂಚಾಯಿತಿಗಳು ಏನು ಕೆಲಸ ಮಾಡಬೇಕೋ ಅವೆಲ್ಲವನ್ನೂ ಮಾಡಬೇಕಾಗುತ್ತದೆ.

ಶ್ರೀ ಕೆ. ಎನ್. ವೀರಪ್ಪ ಗೌಡ.—ಪಂಚಾಯಿತಿ ಸೆಕ್ರೆಟರಿಗಳು ಮತ್ತು ವಿಲೇಜ್ ಅಕೌಂಟೆಂಟ್ಸ್ ಎರಡೂ ಕೆಲಸಗಳನ್ನೂ ಒಬ್ಬರೇ ಮಾಡಬೇಕೆಂದು ಏನಾದರೂ ತೀರ್ಮಾನ ಮಾಡಿದ್ದೀರಾ ಹೇಗೆ ಸ್ವಾಮಿ ?

ಶ್ರೀ ಪಿ. ಎಂ. ನಾಡಗೌಡ.—ಹಾಗೇನೂ ಮಾಡಿಲ್ಲ. ಮದ್ರಾಸ್ ಭಾಗದೊಳಗೆ, ವಿಲೇಜ್ ಅಕೌಂಟೆಂಟ್ ಎಕ್ಸ್ ಅಫಿಷಿಯೋ ಸೆಕ್ರೆಟರಿಯಾಗಿರುವುದರಿಂದ, ಅದೇ ರೀತಿ ಅಲ್ಲಿಂದ ಬಂದಿರುವ ಭಾಗದೊಳಗೆ ನಡೆಯುತ್ತಿದೆ. ಬೇರೆ ಪ್ರದೇಶಗಳಲ್ಲಿ ಪ್ರತ್ಯೇಕವಾಗಿ ಸೆಕ್ರೆಟರಿಗಳು ಇದ್ದಾರೆ. ಇದೆಲ್ಲವನ್ನೂ ವಿಚಾರ ಮಾಡಿ, ಒಂದು ಸಂಯೋಜಿತವಾದ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದಿದ್ದಾರೆ.

ಶ್ರೀ ಸದಾಶಿವಪ್ಪ ಪಾಟೀಲ್.—ಉಪಸಮಿತಿಯ ವರದಿ ಬಂದ ಮೇಲೆ ವಿಚಾರ ಮಾಡುತ್ತೇವೆ ಎಂದು ಹೇಳಿದರು. ಮೊದಲು ಕೊಂಡಜ್ಜಿ ಬಸಪ್ಪ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಲಾಗಿತ್ತು. ಅವರು ವರದಿಯನ್ನು ಕೊಟ್ಟಿದ್ದಾರೆಯೇ ? ಅವರ ವರದಿಯು ಪರಿಶೀಲನೆಯಲ್ಲಿದೆಯೇ ಹೇಗೆ ?

ಶ್ರೀ ಪಿ. ಎಂ. ನಾಡಗೌಡ.—ಕೊಂಡಜ್ಜಿ ಬಸಪ್ಪನವರ ವರದಿ ಪರಿಶೀಲನೆಯಲ್ಲಿದೆ. ಈ ಸಬ್ ಕಮಿಟಿಯು ಪಂಚಾಯಿತಿ ಸೆಕ್ರೆಟರಿ ದರ್ಜೆ ಪಗಾರ, ಹಣಕಾಸಿನ ಪರಿಸ್ಥಿತಿ, ಪಂಚಾಯಿತಿಯ ಆರ್ಥಿಕ ಶಕ್ತಿ ಮುಂತಾದ್ದನ್ನೆಲ್ಲಾ ವಿಚಾರಮಾಡಿ ಸರಕಾರಕ್ಕೆ ವರದಿ ಸಲ್ಲಿಸುವುದು.

ಶ್ರೀ ಎಂ. ಎಸ್. ಕೃಷ್ಣನ್.—ಸಬ್ ಕಮಿಟಿ ಎಷ್ಟು ಸಲ ಸೇರಿತ್ತು ? ಸೇರಿದಾಗ ಚರ್ಚೆ ನಡೆಸಲಾಯ್ತೆ ? ಯಾವಾಗ ವರದಿ ಬರಬಹುದು ? ಇಷ್ಟೇ ದಿವಸಗಳಲ್ಲಿ ವರದಿ ಸಲ್ಲಿಸಬೇಕೆಂದು ಆದೇಶ ಕೊಡಲಾಗಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅದರಲ್ಲಿ ನಾನೂ ಒಬ್ಬ ಸದಸ್ಯ. ಅದು 8—10 ಸಲ ಸೇರಿತ್ತು. ಇದು ಕ್ಲಿಷ್ಟ ಸಮಸ್ಯೆ. ಆದುದರಿಂದ ನಿಧಾನವಾಗಿದೆ. ಆದಷ್ಟು ಶೀಘ್ರವಾಗಿ ವರದಿ ಸಲ್ಲಿಸಲಾಗುವುದು.

ಶ್ರೀ ಎಸ್. ಎಸ್. ಅರಕೇರಿ.—ಮೈಸೂರು ರಾಜ್ಯದಲ್ಲಿರುವ ಪಂಚಾಯಿತಿ ಸೆಕ್ರೆಟರಿಗಳಲ್ಲಿ ಎಸ್. ಎಸ್. ಎಲ್. ಸಿ. ಆಗಿರುವವರೆಷ್ಟು ಮಂದಿ ಇದ್ದಾರೆ ? ಪದವೀಧರರು ಎಷ್ಟು ಮಂದಿ ಇದ್ದಾರೆ ?

ಶ್ರೀ ಪಿ. ಎಂ. ನಾಡಗೌಡ.—ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

ಶ್ರೀ ಎಸ್. ಎಚ್. ತಮ್ಮಯ್ಯ.—ಹಂಗಾಮಿ ನೇಮಕಗಳನ್ನು ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವಿದೆ, ಅಂಥವರಿಗೆ 20—30 ರೂಪಾಯಿಗಳಿಗೆ ಮೇರೆ ಕೊಡುವುದಿಲ್ಲ, ಅವರು ಹರಿಜನ, ಗಿರಿಜನರಿಗೆ ಕೊಡುವ ಮುರಮುಟ್ಟುಗಳನ್ನು ಮಾರಿಕೊಂಡಿದ್ದಾರೆಂದು ದೂರಿತ್ತರೂ ಅವರ ಮೇರೆ ಕ್ರಮ ತೆಗೆದುಕೊಂಡಿಲ್ಲ. ಆದುದರಿಂದ ಆದಷ್ಟು ಬೇಗ ಖಾಯಮಾದ ಸೆಕ್ರೆಟರಿಗಳನ್ನು ನೇಮಕ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಮಾಡುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್.—ಕಾರ್ಯದರ್ಶಿಗಳನ್ನು ನೇಮಕ ಮಾಡುವಾಗ ಅವರಿಗೆ ಆಗುವ ಖರ್ಚನ್ನು ಪೂಹಿಸಲು ಸಾಧ್ಯವೇ ಎಂಬುದನ್ನೂ ಮತ್ತು ಬೇರೆ ಇಲಾಖೆಗಳಲ್ಲಿ ಸೆಕ್ರೆಟರಿಗಳಿಗಿರಬೇಕಾದ

ವಿದ್ಯಾರ್ಹತೆ ಪಡೆದಿರುವವರಿಗೆ ಕೊಡುವ ನಂಬಳ ಮತ್ತು ಇಲ್ಲಿ ತೆಕ್ಕೆಬರಿಗಳಿಗೆ ಕೊಡುವ ನಂಬಳವನ್ನು ಡಿಸ್‌ಕ್ರಿಮಿನೇಷನ್ ಇದೆ ಎಂಬುದನ್ನೂ ಗಮನಿಸಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ಎರಡ್ನೂ ಪ್ರಶ್ನೆಗಳನ್ನೂ ವಿಚಾರ ಮಾಡಬೇಕೆಂಬುದು ನಿರಕಾರಡ ಇಚ್ಛೆಯಾಗಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ವರದಿ ಯಾವಾಗ ಬರುವುದು ?

ಶ್ರೀ ಪಿ. ಎಂ. ನಾಡಗೌಡ.—ಅದಷ್ಟು ಜಾಗ್ರತೆ ಬರುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಅನೇಕ ಬಡ ಶಾನುಭೋಗರು ತಮ್ಮ ಚಾಕರಿ ನಂಬಿಕೊಂಡು ಜೀವನ ಮಾಡುತ್ತಿರುವುದರಿಂದ ಜಿಲ್ಲಾಧಿಕಾರಿಗಳಿಗೆ ನೂಡನೆ ಕೊಟ್ಟು ಅವರನ್ನು ಕಾರ್ಯದರ್ಶಿಯಾಗಿ ತೆಗೆದುಕೊಳ್ಳುತ್ತೀರಾ ? ಹಾಗೆ ತೆಗೆದುಕೊಳ್ಳದಿದ್ದರೆ ಅವರು ನಿರುದ್ಯೋಗಿಗಳಾಗುವುದಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಅದು ರೆವೆನ್ಯೂ ಖಾತೆಗೆ ಸಂಬಂಧಪಟ್ಟಿದೆ.

Sri DIGAMBARA RAO B. KALMANKAR.—May I know what instructions have been given with reference to question (*d*) ?

Sri P. M. NADGOUDA.—We have issued instructions that if there are any cases where T. A. has not been paid, it may be paid to them.

Roads constructed in Baindur Block, South Kanara District

55. Sri SUBBA RAO HALSNAD (Baindoor).—

Will the Minister for Public Works be pleased to state :—

(*a*) the length of the road constructed after 1962 in Baindur Block, South Kanara District together with the starting and ending places and the number of drinking water wells and tanks constructed and the places thereon (Villagewise information may please be furnished) ;

(*b*) the names of villages wherein the roads are yet to be constructed ;

(*c*) the reasons for neglecting or not constructing the following fisheries roads situated in the places noted against them :—

(i) Koderi (South Kanara)
(ii) Uppunda (South Kanara)
(iii) Shiroor (South Kanara)
(iv) Gangolli (South Kanara) ?

A. —Sri VEERENDRA PATIL (Minister for Public Works).—

(*a*) *Vide* list appended.

(*b*) It cannot be said definitely.

(*c*) (*i*) The construction work of Koderi road is completed.
(*ii*) Another route to Uppunda is under consideration.
(*iii*) The work of Shiroor road is completed.